**೧ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ನಾಗಮಂಗಲ.**

## ಸಿ.ಸಿ. 188/2018

ಸಾಕ್ಷಿದಾರರ ಹೇಳಿಕೆ ಃ

| | | |
|---|---|---|
| ಹೆಸರು | ಸರಸ್ವತಿ | ಚಾಸಾಃ **1** ಪ್ರಾಸಾಃ **1** |
| ಗಂಡನ ಹೆಸರು | ದೇವಲಿಂಗೇಗೌಡ | |
| ವಯಸ್ಸು | **40** ವರ್ಷ | |
| ವೃತ್ತಿ | ಗೃಹಿಣಿ | |
| ವಾಸಸ್ಥಳ | ಕಲ್ಲುದೇವನ ಹಳ್ಳಿ ಗ್ರಾಮ | |

ದಿನಾಂಕಃ 05.11.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

ಚಾ.ಸಾ-2 ರಿಂದ 6 ನಮ್ಮ ಊರಿನವರು. ಈ ಪ್ರಕರಣದ ಆರೋಪಿ ನನಗೆ ಗೊತ್ತು. ಆರೋಪಿ ನನ್ನ ಜೊತೆ ಯಾವುದೇ ಜಗಳ ಮಾಡಿಲ್ಲ, ಅವ್ಯಾಚ್ಯ ಶಬ್ದಗಳಿಂದ ಬೈದಿಲ್ಲ, ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯ ಪಡಿಸಿಲ್ಲ, ಸಾರ್ವಜನಿಕವಾಗಿ ಅಪಮಾನ ಮಾಡಿರುವುದಿಲ್ಲ, ನಾನು ಆರೋಪಿಯ ವಿರುದ್ಧ ಯಾವುದೇ ದೂರು ಕೊಟ್ಟಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ, ಈಗ ತೋರಿಸಿರುವ ದಾಖಲೆಯಲ್ಲಿ ನನ್ನಸಹಿ ಇರುತ್ತದೆ . ಸಾಕ್ಷಿಯು ಗುರುತಿಸಿರುವ ದಾಖಲೆಯು ದೂರು ಅರ್ಜಿ ಆಗಿದ್ದು, ಅದನ್ನು ಈಗ ನಿಪಿ-**1** ಎಂದು, ಸಹಿಯನ್ನು ನಿಪಿ**1**ಎ ಗುರುತಿಸಲಾಯಿತು. ಈಗ ತೋರಿಸಿದ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು ಮಹಜರು

ಆಗಿದ್ದು, ಅದನ್ನು ನಿಪಿ.**2** ಎಂದು, ಸಹಿಯನ್ನು ನಿಪಿ**2** ಎ ಎಂದು ಗುರುತಿಸಲಾಯಿತು. ನನ್ನ ಮತ್ತು ಆರೋಪಿಗಳ ನಡುವೆ ಆದ ಬಾಯಿಮಾತಿನ ಜಗಳದ ವಿಚಾರದಲ್ಲಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಕೆಲವೊಂದು ದಾಖಲೆಗಳಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ, ಅವು ಯಾವ ದಾಖಲೆಗಳು, ಅದರಲ್ಲಿ ಏನು ಬರೆದಿರುತ್ತಾರೆಂದು ಗೊತ್ತಿಲ್ಲ. ನಿಪಿ-1 ದೂರಿನಲ್ಲಿ ಮತ್ತು ನಿಪಿ.2 ಮಹಜರಿನಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ಕೊಟ್ಟಿಲ್ಲ. ಗಾಯದ ಹಿನ್ನೆಲೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ

ದಿನಾಂಕಃ07.06.2016 ರಂದು ಬೆಳಗ್ಗೆ 6.30 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಹಾಲಿನ ಡೈರಿಯ ಮುಂಬಾಗದಲ್ಲಿರುವ ಸಾರ್ವಜನಿಕ ತಿರುಗಾಡುವ ರಸ್ತೆಯಲ್ಲಿ ನಾನು ಡೈರಿಗೆ ಹಾಲು ಹಾಕಲು ಹೋಗಿದ್ದಾಗ ಆರೋಪಿಯು ಸಹ ಇದ್ದು, ನಾನು ಆರೋಪಿಯನ್ನು ನೀವು ಏಕೆ ನಾಗಮಂಗಲದಲ್ಲಿ ಚಾಸಾ 4 ರವರ ಬಳಿ ನನ್ನ ಹೆಸರನ್ನು ಹೇಳಿದ್ದೀರಾ ಎಂದು ಕೇಳಿದ್ದಕ್ಕೆ ಆರೋಪಿಯು ನನ್ನನ್ನು ನೀನು ಯಾರೇ ಕೇಳೋಕೆ ಬೋಸುಡಿ ಮುಂಡೆ , ಲೋಫರ್ ಮುಂಡೆ , ಬೆವರಿಸಿ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜುಟ್ಟನ್ನು ಹಿಡಿದು ಎಳೆದಾಡಿ ಕೆಳಕ್ಕೆ ಕೆಡವಿಕೊಂಡು ಸಾರ್ವಜನಿಕವಾಗಿ ಅಪಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ ಮತ್ತು ಕೈಯಿಂದ ನನ್ನ ಗದ್ದಕ್ಕೆ ಮತ್ತು ಎಡಕೈಗೆ ಹೊಡದು ತರಚಿದ ಗಾಯ ಮಾಡಿ ಕಾಲಿನಿಂದ ಒದ್ದು ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಸಂಬಂಧ ಪೋಲಿಸ್ ಠಾಣೆಯಲ್ಲಿ ನಿಪಿ.1 ರಂತೆ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಗಾಯದ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ನಂತರ ದಿಃ 22.06.2016 ರಂದು ಪೋಲೀಸರು ಘಟನ ಸ್ಥಳಕ್ಕೆ ಬಂದಿದ್ದು, ನಾನು ತೋರಿಸಿದ ಘಟನ ಸ್ಥಳದಲ್ಲಿ ಚಾಸಾ.5 ಮತ್ತು 6 ರವರ ಸಮಕ್ಷಮ ಸಂಜೆ 7.15 ರಿಂದ 7.45 ಗಂಟೆಯವರೆಗೆ ನಿಪಿ.2 ರಂತೆ ಮಹಜರು ಬರೆದರು ಎಂದರೆ ಸರಿಯಲ್ಲ.

ನಂತರ ಅದೇ ದಿನ ''ನಾನು ದಿಃ22.06.2016 ರಂದು------------ ನೋವುಂಟು ಮಾಡಿರುತ್ತಾನೆ'' ಎಂದು ಈಗ ಓದಿ ಹೇಳಿದಂತೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು.

ನಾನು ಮತ್ತು ಆರೋಪಿಗಳು ಪ್ರಕರಣವನ್ನು ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ. ಈಗ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗಳಿಗೆ ಸಹಾಯವಾಗಲೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

೧ನೇ ಅಪರ_ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಸಾಕ್ಷಿದಾರರ ಸಹಿ. ನಾಗಮಂಗಲ.